# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 07.10.2011**

ದಿನಾಂಕ: 20.10.2011 ರಂದು ಬೆಂಗಳೂರು ಮಹಾನಗರದ ಜನತೆಯ ಕನಸಾದ **'ಮೆಟ್ರೋ ರೈಲು'** ಉದ್ಘಾಟನಾ ಕಾರ್ಯಕ್ರಮಕ್ಕೆ ಮಾನ್ಯ ಪ್ರಧಾನಮಂತ್ರಿಗಳು, ಘನತೆವೆತ್ತ ರಾಜ್ಯಪಾಲರು, ಮಾನ್ಯ ಮುಖ್ಯಮಂತ್ರಿಗಳು, ಕೇಂದ್ರ ಹಾಗೂ ರಾಜ್ಯ ಸಚಿವರುಗಳು ಆಗಮಿಸುತ್ತಿರುವುದರಿಂದ ದಿನಾಂಕ: 08.10.2011 ರಿಂದ 21.10.2011ರ ವರೆಗೆ ಅನಧಿಕೃತವಾಗಿ ಫ್ಲೆಕ್ಸ್ ಬ್ಯಾನರ್‌ಗಳನ್ನು ಅಳವಡಿಸುವುದನ್ನು ನಿಷೇಧಿಸಲಾಗಿದೆ ಹಾಗೂ ಬೆಂಗಳೂರು ನಗರದಲ್ಲಿ ಹಬ್ಬದ ಶುಭಾಶಯಗಳಿಗೆ, ಹುಟ್ಟುಹಬ್ಬದ ಶುಭಾಶಯಗಳಿಗೆ ಮತ್ತು ಮುಂತಾದ ಕಾರ್ಯಕ್ರಮಗಳಿಗೆ ಫ್ಲೆಕ್ಸ್ ಬ್ಯಾನರ್, ಬಂಟಿಂಗ್ ಹಾಗೂ ಕಟೌಟ್ಸ್‌ಗಳನ್ನು ಅಳವಡಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಇಂತಹ ಜಾಹೀರಾತುಗಳು ಕಂಡುಬಂದಲ್ಲಿ ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಲಾಗುವುದು ಮತ್ತು ಅನಧಿಕೃತವಾಗಿ ಪ್ರದರ್ಶಿಸುವ ವಾಣಿಜ್ಯ ಜಾಹೀರಾತುಗಳನ್ನು ಸಹ ತೆರವುಗೊಳಿಸಲಾಗುವುದು ಎಂದು ಪಾಲಿಕೆಯ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 07.10.2011**

ರೈಲ್ವೆ ಇಲಾಖೆಯಲ್ಲಿ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸಲು ಟೆಂಡರ್ ಮುಖಾಂತರ ಐದು ವರ್ಷಗಳ ಅವಧಿಗೆ ನೀಡಲಾಗಿದ್ದು, ಕಾನೂನಿನ ಪ್ರಕಾರ ರೈಲ್ವೆ ಇಲಾಖೆಯವರು ಟೆಂಡರ್ ನೀಡಿದ ನಂತರ ಸಂಬಂಧಿಸಿದ ಸಂಸ್ಥೆಯವರು ಮಹಾನಗರ ಪಾಲಿಕೆಗೆ ಸಂಪರ್ಕಿಸಿ ಜಾಹೀರಾತು ತೆರಿಗೆ ಪಾವತಿಸಬೇಕಿರುತ್ತದೆ. ಆದರೆ, ಟೆಂಡರ್ ಪಡೆದ ಮೆ॥ ಲಕ್ಷ್ಯ ಮೀಡಿಯಾ, ಮೆ॥ ಅವಿನಾಶಿ ಆಡ್ಸ್ ಮತ್ತು ಮೆ॥ ಡೈಮಂಡ್ ಪಬ್ಲಿಸಿಟೀಸ್ ರವರು ಜಾಹೀರಾತು ತೆರಿಗೆಯನ್ನು ಪಾಲಿಕೆಗೆ ಪಾವತಿಸದೇ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಈ ಸಂಸ್ಥೆಗಳಿಂದ ಪಾಲಿಕೆಗೆ ದಿನಾಂಕ: 01.12.2007 ರಿಂದ 30.12.2010ರ ವರೆಗೆ ಸುಮಾರು ರೂ.4,05,39,999/- ಗಳು ಪಾವತಿಸಬೇಕಾಗಿದ್ದು, ರೂ.1,59,45,172/- ಗಳನ್ನು ಪಾವತಿಸಿರುತ್ತಾರೆ. ಸದರಿ ಸಂಸ್ಥೆಗಳಿಂದ ಉಳಿದ ಮೊತ್ತವಾದ ರೂ.2,45,94,827/- ಗಳನ್ನು ಪಾವತಿಸಬೇಕಾಗಿರುತ್ತದೆ.

ಪಾಲಿಕೆಗೆ ರೂ.2,45,94,827/- ಗಳು ಬಾಕಿ ಇದ್ದರೂ ರೈಲ್ವೆ ಇಲಾಖೆಯವರು ಟೆಂಡರ್ ಕರೆದಿರುತ್ತಾರೆ. ಆದಕಾರಣ ದಿನಾಂಕ: 04.10.2011 ರಂದು ಡಬ್ಲ್ಯೂ.ಪಿ. ನಂ.37828/2011 ರಲ್ಲಿ ರೈಲ್ವೆ ಇಲಾಖೆಯವರು ಟೆಂಡರ್ ಕರೆದಿರುವ ಫಲಕಗಳಿಗೆ ಮುಂದಿನ ಆದೇಶದವರೆಗೆ ಕಾರ್ಯಾದೇಶವನ್ನು ನೀಡಬಾರದೆಂದು ಘನ ಉಚ್ಛ ನ್ಯಾಯಾಲಯವು ಆದೇಶ ನೀಡಿದೆ.

ಮತ್ತೊಂದು ಪ್ರಕರಣದಲ್ಲಿ ಮೆ॥ ಲಕ್ಷ್ಯ ಮೀಡಿಯಾ ರವರು ಪಾಲಿಕೆಗೆ ರೂ.92,77,222/- ಗಳನ್ನು ಜಾಹೀರಾತು ತೆರಿಗೆ ಪಾವತಿಸಬೇಕಿದ್ದು, ಇವರು ಪಾಲಿಕೆ ವಿರುದ್ಧ ದಾವೆ ಹೂಡಿದ್ದು, ಅಂತಿಮವಾಗಿ ಘನ ಉಚ್ಛ ನ್ಯಾಯಾಲಯವು ಸದರಿ ಸಂಸ್ಥೆಯವರು ಪಾಲಿಕೆಗೆ ಪಾವತಿಸಬೇಕಾಗಿರುವ ಜಾಹೀರಾತು ತೆರಿಗೆಯನ್ನು ಬ್ಯಾಂಕಿನಲ್ಲಿ ಜಮಾ ಮಾಡಬೇಕೆಂದು ಆದೇಶ ನೀಡಿದೆ ಎಂದು ಉಪ ಆಯುಕ್ತರು (ಜಾಹೀರಾತು) ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**